


### ಕಾಮನ್‌ವೆಲ್ತ್ ಆತಂಕ!

ಭ್ರಷ್ಟಾಚಾರ, ಉಗ್ರರ ಕರಿ ನೆರಳಿನ ಭೀತಿಯಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಬಗ್ಗೆ ಡಿ.ಗರುಡರ ಮುಖಪುಟ ಲೇಖನ ಓದಿದಾಗ ಆತಂಕವೇ ಹೆಚ್ಚಾಗಿತ್ತು. ಆದರೆ ಈಗೇನೋ ಸರಾಗವಾಗಿ ನಡೆದಿರುವಂತೆ ಕಾಣುತ್ತಿದೆ.

-ಡಾ.ಕೆ.ಕೆ.ಜಯಚಂದ್ರ ಗುಪ್ತ, ಹಾಸನ/ ಅರ್ಜುನ ವಿ. ಮಂಡ್ಯ/ ಪಿ.ಗೋವಿಂದರಾಜ್, ಶಿವಮೊಗ್ಗ/ ರಾಜೇಂದ್ರಕುಮಾರ, ದೊಡ್ಡಬಳ್ಳಾಪುರ/ ದೀಪಕ್, ಕಂಬದಕೋಣೆ/ ಮೊಳಕಾಲ್ಮುರು ಸುರೇಶ, ಬಳ್ಳಾರಿ/ ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು/ ಅಮೃತೇಶ್ ತಂಡರ, ಅಣ್ಣಿಗೇರಿ

### ನಗು-ಅಳು

'ಸ್ಮೈಲ್ ಪ್ಲೀಸ್...!' (ಧಾರಿಣಿ ಎಚ್.ಬಿ.) ಹೌದು. ನಗೆಯ ಬಗೆಗಳು ಹಲವು. ಆದರೆ ಅಳುವಿನ ಬಗೆ ಒಂದೇ. ('ಮೊಸಳೆ ಕಣ್ಣೀರು' ಬೇರೆ!)

-ಪಿ.ಪಿ.ಕೆ., ಮೈಸೂರು

### ಉತ್ತಮ ಕಥಾ ಶೀರ್ಷಿಕೆ

ಬಿ.ಎಲ್. ವೇಣು ಅವರ 'ಆರು ಮುನಿದು ನಮ್ಮನೇನು ಮಾಡುವರು' ಕಥೆಯ ಶಿರ್ಷಿಕೆ ಬಹಳ ಇಷ್ಟ ವಾಯಿತು. ತರಾಸು ನಂತರ ಅವರಿಗಿಂತ ಹೆಚ್ಚಾಗಿ ಚಿತ್ರದುರ್ಗ ಇತಿಹಾಸದ ಮೇಲೆ ವೇಣು ಕಥೆ, ಕಾದಂಬರಿ ಬರೆಯುತ್ತಿದ್ದಾರೆ. ಇತಿಹಾಸದ ಘಟನೆ ಗಳಿಗೆ ಚ್ಯುತಿ ತಾರದಂತೆ ವೇಣು ಅವರು ಕಲಾತ್ಮಕ ವಾಗಿ ಕಥೆಗಳನ್ನು ಕಟ್ಟಬಲ್ಲರು. ವಚನಗಳ ಬಳಕೆ ಸಂದರ್ಭೋಚಿತವಾಗಿವೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ರುದ್ರೇಶ್ ಅದರಂಗಿ, ಕೋಲಾರ

### ಇಂಥ ಕಥೆಗಳು ಬೇಡ

ಕಥೆ ಬರೆಯುವ ವಸ್ತುವಿನಲ್ಲಿ ಮತ್ತು ಕಥಾನಾಯಕನಲ್ಲಿ ಒಂದು ಉದಾತ್ತತೆ ಇರಲಿ, ಓದುಗರಿಗೆ ಒಂದು ಸಂದೇಶ ಯಾ ಉಪದೇಶ ಅಪೇಕ್ಷಣೀಯ. ಎಸ್.ಬಿ.ಜೋಗುರರ 'ಕೈಗುಣ'ದಂಥ ಕಥೆಗಳು ಬೇಡ.

-ಶಕುಂತಲಾ ರಾವ್, ಬೆಂಗಳೂರು

### ವೈ-ಚಾರಿಯ ವಾಸ್ತವ

'ದೆವ್ವವಿದೆ ಎಚ್ಚರ!' ಭೂತ ಪ್ರೇತ ದೆವ್ವ ಕುರಿತಾದ ವೈಚಾರಿಕ ಬರಹ ವಾಸ್ತವತೆಯ ಪ್ರತಿರೂಪವಾಗಿ ಹೊರ ಹೊಮ್ಮಿದೆ.

-ನೆ.ಲ.ರಾಂ., ಬೆಂಗಳೂರು

### ಸಭ್ಯರ ಆಟ ಕ್ರಿಕೆಟ್ ಮಾತ್ರ ಅಲ್ಲ

ಕ್ರಿಕೆಟ್ ಆಟದಲ್ಲಿ ನಡೆದ ಅಸಭ್ಯ ಘಟನೆಗಳ ಲಿಸ್ಟ್‌ನ್ನು 'ಸುಧಾ' ಸೆ. 30ರ ಸಂಚಿಕೆಯಲ್ಲಿ ಕೊಟ್ಟಿರುವುದು ಸರಿಯಾಗಿದೆ. ಆದರೆ ಕ್ರಿಕೆಟ್ ಆಟಕ್ಕೆ ಮಾತ್ರ ಸಭ್ಯರ ಆಟ ಎಂದು ಕರೆಯಲು ಕಾರಣಗಳೇನು? ಹಾಗಾದರೆ ಭಾರತಕ್ಕೆ ಸತತ ಒಲಿಂಪಿಕ್ ಸ್ವರ್ಣಪದಕ ತಂದುಕೊಟ್ಟ ಹಾಕಿ, ಜಗತ್ತಿನಲ್ಲೆಲ್ಲಾ ಕ್ರಿಕೆಟ್‌ಗಿಂತ 10 ಪಾಲು ಹೆಚ್ಚು ಜನಪ್ರಿಯವಾಗಿರುವ ಫುಟ್‌ಬಾಲ್, ಬಾಸ್ಕೆಟ್ ಬಾಲ್, ಟೆನ್ನಿಸ್ ಇವುಗಳೇನು ಅಸಭ್ಯರ, ಬರ್ಬರರ, ಆಟವೇ?

-ಪ್ರವೀಣ್. ಎಸ್. ಶೆಟ್ಟಿ, ಮಂಗಳೂರು

### ಮಾಸ್ತಿಯ ಹೃದಯಸ್ಪರ್ಶಿ ಪರಿಚಯ

ಮಾಸ್ತಿ ಸಾಹಿತ್ಯ: ಬಾಲ್ಯ– ಬದುಕಿನ ಕುರಿತ ಜಿ.ಎಸ್. ಸಿದ್ದಲಿಂಗಯ್ಯನವರ ಲೇಖನ ರೋಚಕ, ಹೃದಯ ಸ್ಪರ್ಶಿ ಹಾಗೂ ಸಾಂದರ್ಭಿಕವಾಗಿದೆ.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಟಿಆರ್‌ಪಿಗೆ ಯಾವ ಮಾರ್ಗವಾದರೂ ಸರಿ!

ಜಾಣರ ಪೆಟ್ಟಿಗೆಯಲ್ಲಿ ಪ್ರಕಟವಾಗಿರುವ ರುದ್ರೇಶ್ ಅದರಂಗಿಯವರ ನಗರ ಪಕ್ಷಪಾತಿ ಟಿಆರ್‌ಪಿ ಹಾಗೂ ಉಷಾ ಕಟ್ಟೆಮನೆಯವರ ರಿಯಾಲಿಟಿ ಶೋಗಳ ಹಿಂಸೆ ಲೇಖನ– ಈ ಎರಡೂ ಬರಹಗಳು ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಚಾನೆಲ್‌ಗಳಲ್ಲಿ ಎಂತಹ ದಾರಿಯಾದರೂ ತುಳಿಯಲು ಸರಿ ಎಂಬುದನ್ನು ಒತ್ತಿ ಹೇಳಿವೆ. ಈ ಬಗ್ಗೆ ಬೆಳಕು ಚೆಲ್ಲಿವೆ.

-ಎಂ.ಸರ್ದಾರ್, ಅರಸೀಕೆರೆ/ ವೈ.ಎಂ.ಚಂದ್ರಶೇಖರ್, ಸಿದ್ದಾಪುರ

### ಒಬ್ಬರೇ ಮಹಿಳೆ- ನಾಚಿಕೆಗೇಡು

ಬಿ.ಎಂ.ಹನೀಫ್‌ರ 'ಎಲ್ಲಿದ್ದಾರೆ ಮಹಿಳೆಯರು?' ಬರಹ ಬಿಜೆಪಿ ಆಡಳಿತಕ್ಕೆ ಸಂದರ್ಭೋಚಿತ. ಆರು ಮಹಿಳೆಯರು ಆರಿಸಿ ಬಂದಿದ್ದರೂ ಒಬ್ಬರಿಗೆ ಮಾತ್ರ ಮಂತ್ರಿ ಪದವಿ ನೀಡಿರುವುದು ನಾಚಿಕೆ ಗೇಡಿನ ಪ್ರಸಂಗ. ಮಹಿಳೆ ಪುರುಷನಿಗಿಂತ ಕಡಿಮೆ ಭ್ರಷ್ಟಳು ಎಂಬುದು ಇದಕ್ಕೆ ಕಾರಣವಿರಬಹುದೆ?

-ಪಿ.ಎಸ್.ಶ್ರೀವತ್ಸ, ಬೆಂಗಳೂರು

### 'ಸುಧಾ' ಬೆಲ್ಲದಚ್ಚು ಇದ್ದಂತೆ

'ಸುಧಾ' ಪತ್ರಿಕೆ ಎಷ್ಟಂತ ವರ್ಣಿಸಲಿ. ಅದು ಬೆಲ್ಲದಚ್ಚು ಇದ್ದಂತೆ. 'ಅಮ್ಮನ ಅಪ್ಪುಗೆ'– ಎನ್. ಜಗನ್ನಾಥ ಪ್ರಕಾಶರ ಬರಹ ಹಾಗೂ ಕೆ.ಎಂ.ಬಿ. ಪ್ರಸಾದ್‌ರ ಚಿತ್ರಗಳ ಪುಟ ವಿನ್ಯಾಸ ನೋಡಿ ದೇವರೆ ಅಮ್ಮನಾಗಿ ಬಂದಿದ್ದಾಳೆ ಅನಿಸಿತು.

-ಬಿ.ಎನ್. ಸೋಲ್ಲಾಪುರೆ, ಕಮಲನಗರ (ಬೀದರ ಜಿಲ್ಲೆ)/ ಕೆ.ವಿ. ಶಿವಕುಮಾರ್, ಕಾಳೀಹುಂಡಿ

### 'ಸುಧಾ'ಕ್ಕೆ ಡಿಮಾಂಡಪ್ಪೊ ಡಿಮಾಂಡ್

ಕಳೆದ ತಿಂಗಳು ಬೆಂಗಳೂರಿಗೆ ಹೋದಾಗ ಗುರುವಾರ ಪತ್ರಿಕೆ ಮಾರುವವರ ಅಂಗಡಿಗೆ ಹೋಗಿ ಈ ವಾರದ 'ಸುಧಾ' ಕೊಡಿ ಎಂದಾಗ, ಇಲ್ಲಾ ಸಾರ್ 'ಸುಧಾ' ಇಲ್ಲಿ (ಬಸವೇಶ್ವರನಗರ) ಹೆಚ್ಚಿಗೆ ಡಿಮಾಂಡ್ ಇಲ್ಲ ಎಂದಾಗ ಬೇಸರವಾಯಿತು. ಮಾರನೇ ದಿನ ಅದೇ ಅಂಗಡಿ ಎದುರಿಗೆ ಇರುವ ಬಸ್‌ಸ್ಟಾಪ್ ಬಳಿ ನಿಂತಾಗ 'ಸುಧಾ' ರಾರಾಜಿಸುತ್ತಿತ್ತು. ಏನೆಂದು ವಿಚಾರಿಸಿದಾಗ ನಿಮ್ಮ ಹಾಗೆ ಮೂರು ನಾಲ್ಕು ಜನ ಕೇಳಿದರು ಎಂದಾಗ 'ಸುಧಾ'ಕ್ಕೆ ಇತ್ತೀಚೆಗೆ ಬೇಡಿಕೆ ಹೆಚ್ಚಾಗಿದ್ದು ಗೊತ್ತಾಯಿತು. 'ಸುಧಾ'ಕ್ಕೆ ಡಿಮಾಂಡಪ್ಪೊ ಡಿಮಾಂಡ್!

-ಎಚ್.ಎನ್. ವಿಶ್ವನಾಥ್, ಶಿವಮೊಗ್ಗ

### ಸುಧಾ ನನ್ನ ಬಾಲ್ಯ ಗೆಳತಿ

'ಸುಧಾ' ವಾರ ಪತ್ರಿಕೆಯು ಕನ್ನಡದಲ್ಲಿ 'ನಂ. 1 ಪತ್ರಿಕೆ' ಎಂದು ತಿಳಿದು ತುಂಬಾ ಸಂತಸವಾಯಿತು. ಮೊದಲ ಬಾರಿಗೆ ನನ್ನದೊಂದು ಬರಹ ಪ್ರಕಟವಾಗಿದ್ದು ಇದೇ ಪತ್ರಿಕೆಯಲ್ಲಿ. ಆದ್ದರಿಂದ ನನಗೆ 'ಸುಧಾ'ಳನ್ನು ಕಂಡರೆ ವಿಶೇಷವಾದ ಅಕ್ಕರೆ. ಬಾಲ್ಯದ ದಿನಗಳಲ್ಲಿ ನಮ್ಮ ಮನೆಯಲ್ಲಿ 'ಸುಧಾ' ಮಾತ್ರ ತರಿಸುತ್ತಿದ್ದರು. ಹೀಗಾಗಿ ಅಂದಿನಿಂದಲೇ ನನಗೆ 'ಸುಧಾ'ಳ ಗೆಳತನವಾಯಿತು. ಇದರಲ್ಲಿ ಪ್ರಕಟವಾಗುವ ಎಲ್ಲಾ ಅಂಕಣಗಳೂ ಚೆನ್ನಾಗಿವೆ.

-ಗೀತಾ ಬರ್ಲ ಅಮ್ಮೆ, ಬೆಂಗಳೂರು

